ಒಂದು ಗಡುವಾಗಿ ಇಟ್ಟು ಕಾದಂಬರಿಯನ್ನು ಮತ್ತೆ ಮತ್ತೆ ಓದುವ, ಅದರಲ್ಲಿರುವ ವಿಚಾರಗಳಲ್ಲಿ ಎಷ್ಟು ನಿಜಕ್ಕೂ ಘಟಿಸುತ್ತಿವೆ ಎಂದು ನೋಡುವ ಲೋಲುಪತೆಯಿಂದಾಗಿ ಆ ಕಾದಂಬರಿ ನಮ್ಮಲ್ಲಿ ಇನ್ನೂ ಪ್ರಚಲಿತವಿದೆ. ಮಿಲನ್ ಕುಂದೆರಾ ಈ ಕಾದಂಬರಿಯನ್ನು ತೀರಾ ಸಾಧಾರಣವಾದ ಕೃತಿ ಎಂದು ಬಣ್ಣಿಸಿದ್ದಾನಂತೆ. ಅದಕ್ಕೇ ಏನೋ, ಸಾಹಿತ್ಯ ಲೋಕದಲ್ಲಿ ಚರ್ಚೆಯಾಗುವುದಕ್ಕಿಂತ ಹೆಚ್ಚು ಈ ಕಾದಂಬರಿಗಳು ರಾಜಕೀಯ ಸಂದರ್ಭಗಳಲ್ಲಿ ಚರ್ಚಿತವಾಗುತ್ತವೆ.

'ಮಿನಿಸ್ಟ್ರಿ ಆಫ್ ಟ್ರೂಥ್' ಎನ್ನುವ ಹೆಸರೇ ಆರ್ವೆಲಿಯನ್ ಹೆಸರು. ಇಲ್ಲಿ ಪ್ರತಿದಿನ ಸತ್ಯದ ಮರುನಿರ್ಮಾಣವಾಗುತ್ತದೆ. ಚರಿತ್ರೆಯನ್ನು ಹೊಸ 'ಮಾಹಿತಿ'ಯೊಂದಿಗೆ ಮತ್ತೆ ಮತ್ತೆ ತಿದ್ದಲಾಗುತ್ತದೆ. ಕಾದಂಬರಿಯಲ್ಲಿರುವ ವಿವರಗಳನ್ನು ಓದಿದಾಗ ಅದು ಭವಿಷ್ಯವನ್ನು ಒಂದು ದಾರ್ಶನಿಕ ದುರ್ಬೀನಿನಲ್ಲಿ ನೋಡಿ ಸಮಕಾಲೀನ ಪ್ರಕ್ರಿಯೆಗಳ ಬಗ್ಗೆ ಆಗಲೇ ಆರ್ವೆಲ್ ಆಲೋಚಿಸಿದ್ದರು ಎನ್ನಿಸಿದರೂ, ಅಲ್ಲಿರುವ ಎಲ್ಲ ತಂತ್ರಗಳನ್ನೂ ಭಿನ್ನ ರೀತಿಯಲ್ಲಿ ರಾಜಕೀಯ ಶಕ್ತಿಗಳು ಸರ್ವಕಾಲಕ್ಕೂ ಬಳಸಿಕೊಳ್ಳುತ್ತಲೇ ಬರುತ್ತಿವೆ. ಸತ್ಯದ ಮರುನಿರ್ಮಾಣ ಆಗಲೂ ಈಗಲೂ ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮೂಲ ಕಾದಂಬರಿಯಲ್ಲಿ ಆರ್ವೆಲ್ ಒಂದು ಪ್ರತೀಕವಾಗಿ 2 ಮತ್ತು 2 ಕೂಡಿ 5 $(2+2=5)$ ಎಂದು ಬರೆದಿದ್ದರಂತೆ. ಆದರೆ ಅನೇಕ ಆವೃತ್ತಿಗಳಲ್ಲಿ 5 ಸಂಖ್ಯೆಯನ್ನು ತೆಗೆದು ಅಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಲಾಗಿದೆ. ಆರ್ವೆಲ್ ಏನನ್ನು ಉದ್ದೇಶಿಸಿ ಅಲ್ಲಿ 5ರ ಸಂಖ್ಯೆ ಹಾಕಿದ್ದರೋ, ಯಾಕೆ ಪ್ರಶ್ನಾರ್ಥಕ ಚಿಹ್ನೆಯೇ ಪ್ರಮುಖವಾದ ಪ್ರತೀಕವಾಗಿ ನಿಂತಿತೋ ಅನ್ನುವುದು ಗಹನ ವಿಚಾರ. ಒಂದು ಕಾದಂಬರಿ ತನ್ನ ಲೇಖಕನನ್ನೂ ಮೀರಿ ಅದರದೇ ಜೀವನವನ್ನು ಜೀವಿಸಬಹುದಾದ ವೈಚಿತ್ರ್ಯವನ್ನು ನಾವು ಈ ಪುಸ್ತಕದಲ್ಲಿ ಕಾಣುತ್ತೇವೆ.

ಒಂದು ಕಾದಂಬರಿಯನ್ನು ಕಟ್ಟುವುದರಲ್ಲಿ ಇರಬಹುದಾದ ಹಿನ್ನೆಲೆ, ಲೇಖಕನ ಮನಸ್ಥಿತಿ, ಓದು ಮತ್ತು ವಿಚಾರಧಾರೆಯ ಬಗ್ಗೆ ಲಿನ್ಸ್ಕಿ ವಿಸ್ತಾರವಾಗಿ ಬರೆಯುತ್ತಾರೆ. ಇಂದಿಗೂ ಪ್ರಸ್ತುತವೆನ್ನಿಸುವಂತಹ ವಿಷಯಗಳು ಅಂದಿಗೂ ಹೇಗೆ ಸಲ್ಲುತ್ತಿದ್ದುವು ಎನ್ನುವುದನ್ನು ಬಿಡಿಸಿ ಹೇಳುತ್ತಾರೆ. ಹೀಗಾಗಿಯೇ ಒಂದೆಡೆ ಇವು ಇಂದಿನ ಸಮಸ್ಯೆಗಳಲ್ಲ ಎನ್ನುವ ಸಮಾಧಾನದ ಆಶಾವಾದವು ಬಂದರೆ, ಇನ್ನೊಂದೆಡೆ ಈ ಇಷ್ಟು ವರ್ಷಗಳಲ್ಲಿ ನಾವು ಈ ರೀತಿಯ ನಿರಂಕುಶತೆಗೆ ಒಳಗಾಗುತ್ತಲೇ ಚರಿತ್ರೆಯನ್ನು ಜೀವಿಸುತ್ತಿದ್ದೇವಲ್ಲ ಎನ್ನುವ ನಿರಾಶಾವಾದವೂ ನಮ್ಮನ್ನು ತಟ್ಟುತ್ತದೆ. '1984' ಕಾದಂಬರಿ ಪ್ರಕಟವಾದ ನಂತರ ಆರ್ವೆಲ್ ಬರೆದಿದ್ದರು: "ಕ್ರಾಂತಿಕಾರಿ ಚಟುವಟಿಕೆಗಳ ಅತ್ಯಂತ ಪ್ರೋತ್ಸಾಹದಾಯಕ ಅಂಶವೆಂದರೆ, ಅದು ಸೋಲುತ್ತಲೇ ಇದ್ದರೂ ಅದು ನಿರಂತರವಾಗಿ ಮುಂದುವರೆಯುತ್ತಲೇ ಇರುತ್ತದೆ... ಸಮಾನತೆ, ಮುಕ್ತ ಮತ್ತು ಸ್ವತಂತ್ರ ಜಗತ್ತಿನ ದರ್ಶನ, ವಸುಧೈವ ಕುಟುಂಬಕಂ ನಿಜವಾಗದಿದ್ದರೂ, ಅದರ ಮೇಲಿನ ನಂಬಿಕೆ ಮಾತ್ರ ನಶಿಸುವುದಿಲ್ಲ...' – ಸಾಂತಾಯನ ಹೇಳಿದ ಮಾತು ಬಹುಶಃ ನಿರಂತರ ಸತ್ಯವಿರಬಹುದು – ಚರಿತ್ರೆಯಿಂದ ಪಾಠ ಕಲಿಯದವರು ಅದನ್ನೇ ಮತ್ತೆ ಜೀವಿಸುತ್ತಾರೆ. ಇದು ಎಂದಿಗೂ ಸಲ್ಲುವ ಮಾತಾಗುತ್ತದೆ.

ಆರ್ವೆಲ್ಲರ 'ಅನಿಮಲ್ ಫಾರ್ಮ್' ಪ್ರಕಟಿಸಲು ಹಲವು ಪ್ರಕಾಶಕರು ಹೆದರಿದರು. ಆ ಕಾದಂಬರಿ ಭ್ರಾಮಕ ಲೋಕದಲ್ಲಿನ ಒಂದು ರೂಪಕವಾಗಿ ರಚನೆಗೊಂಡಿದ್ದರೂ, ಅದನ್ನು ನಿಜಜೀವನದ ವಿದ್ಯಮಾನಗಳಿಗೆ ಆಗಲೂ ಹೋಲಿಸಿದ್ದರಂತೆ. ಒಬ್ಬ ಪ್ರಕಾಶಕ ಇದನ್ನು ರಷ್ಯಾದ ಆಂತರಿಕ ಮತ್ತು ವಿದೇಶಿ ನೀತಿಯ ಮೇಲಿನ ಹಲ್ಲೆ ಎಂದು ಬಣ್ಣಿಸಿದರಂತೆ. ಸಾಲದ್ದಕ್ಕೆ ಆಳುವ ಜನರನ್ನು ಹಂದಿಗಳೆಂದು ಬಣ್ಣಿಸಿರುವುದು ಜನರ ಭಾವನೆಗಳಿಗೆ ಆಘಾತವುಂಟು ಮಾಡಬಹುದು ಎನ್ನುವ ನಿಟ್ಟಿನಿಂದ ವಿರೋಧವೂ ಬಂದಿತ್ತಂತೆ. ಅದು ಹಸ್ತಪ್ರತಿಯ ಘಟ್ಟದಲ್ಲಿದ್ದಾಗಲೇ ಅದಕ್ಕಿರಬಹುದಾದ ವ್ಯಾಪಕವಾದ ಅರ್ಥಸಾಧ್ಯತೆಗಳನ್ನು ಬಿಡಿಸಿನೋಡಲಾಗಿತ್ತು. ಇದು ಸಾಲದೆಂಬಂತೆ ಆರ್ವೆಲ್ ತಮ್ಮ ಚಡಪಡಿಕೆಯಿಂದ ಬರೆದಿದ್ದ (ಆದರೆ ಪ್ರಕಟಿಸದ) ಲೇಖಕನ ಮಾತುಗಳಲ್ಲಿ ಈ ವಾಕ್ಯಗಳಿದ್ದುವು – "ಯಾವುದೇ ಅಧಿಕಾರಿಕ ಪ್ರತಿಬಂಧವಿಲ್ಲದೆಯೇ ಜನಪ್ರಿಯವಲ್ಲದ ವಿಚಾರಗಳನ್ನೂ ಮುಜುಗರದ ವಾಸ್ತವವನ್ನು ಮುಚ್ಚಿಡುವುದಕ್ಕೆ ಸಾಧ್ಯ." ಇದರ ಅನುರಣನ ನಮಗೆ